# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ: 15-10-2022 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು**

1. ಶ್ರೀ ವಿನಾಯಕ ವಿ ನಾಯ್ಕ್ (ನೋಡಲ್ ಅಧಿಕಾರಿ)
2. ಶ್ರೀ ಎಸ್. ರಾಜನ್ (ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು)
3. ಶ್ರೀ ಜಿ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
4. ಶ್ರೀಮತಿ ಶ್ರೀಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು,
5. ಕೆ ಶೀಲಾ, ಕಲ್ಯಾಣ ಇಲಾಖೆ,
6. ಶ್ರೀಮತಿ ಗೀತಾ, ಕಿರಿಯ ಅಭಿಯಂತರರು, ಬೆಸ್ಕಾಂ
7. ಶ್ರೀ ಪ್ರವೀಣ್.ಕೆ, ಮಾರ್ಷಲ್,
8. ಶ್ರೀ ಕೆ.ಸಿ ಮಂಜುನಾಥ, ಸ್ಥಳೀಯರು,
9. ಶ್ರೀ ವಿಜಯೇಂದ್ರ ಶೆಟ್ಟಿ, ಸ್ಥಳೀಯರು
10. ಶ್ರೀ ಕಾರೂನ್, ಸ್ಥಳೀಯರು,
11. ಶ್ರೀ ಕೆಂಪರಾಜ್, ಸ್ಥಳೀಯರು,
12. ಶ್ರೀ ಆರ್.ಪಾಂಡಿಯನ್, ಸ್ಥಳೀಯರು,
13. ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು,
14. ಶ್ರೀ ಗೋಪಾಲ ರೆಡ್ಡಿ, ಸ್ಥಳೀಯರು,
15. ಮೇಘಲಾ, ಸ್ಥಳೀಯರು,

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ನೋಡೆಲ್ ಅಧಿಕಾರಿಯವರು ತಮ್ಮ ಕಿರು ಪರಿಚಯವನ್ನು ಸಭೆಯಲ್ಲಿ ನೆರೆದಿದ್ದ ಸದಸ್ಯರಿಗೆ ತಿಳಿಸಿ, ಸಭೆಯನ್ನು ಪ್ರಾರಂಭಿಸಲಾಯಿತು.

**1) ಶ್ರೀ ಕಾರೂನ್, ಸ್ಥಳೀಯರು ಮಾತನಾಡುತ್ತಾ,**

- ವಾರ್ಡ್ ವ್ಯಾಪ್ತಿಯ ಜಯಲಕ್ಷ್ಮಿ ಶಾಲೆ ರಸ್ತೆಯಲ್ಲಿರುವ ಚರಂಡಿಯಲ್ಲಿ ಹೂಳು ತುಂಬಿದ್ದು, ಇದರಿಂದ ನೀರು ಸರಾಗವಾಗಿ ಹರಿಯುತ್ತಿರುವುದಿಲ್ಲವೆಂದು ಅದನ್ನು ತೆರವುಗೊಳಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

➢ ಜಯಲಕ್ಷ್ಮಿ ಶಾಲೆ ರಸ್ತೆಯಲ್ಲಿ ಟೆಂಪೋ ಗೂಡ್ಸ್ ವಾಹನವನ್ನು ರಸ್ತೆಯಲ್ಲಿ ನಿಲುಗಡೆ ಮಾಡಿರುವುದರಿಂದ ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು.

➢ (ಕ್ರಮ:- ಪೊಲೀಸ್ ಇನ್ಸ್‌ಪೆಕ್ಟರ್, ಸಂಚಾರ ಪೊಲೀಸ್ ಠಾಣೆ, ಬಾಣಸವಾಡಿ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

2) <u>ಶ್ರೀ ಮುರುಳೀಧರ್, ಸ್ಥಳೀಯರು ಮಾತನಾಡುತ್ತಾ,</u>

- ವಾರ್ಡ್ ವ್ಯಾಪ್ತಿಯ ಐ.ಓ.ಸಿ ಫ್ಲೈ ಓವರ್ ಮೇಲೆ ಕೇಬಲ್‌ಗಳು ನೇತಾಡುತ್ತಿದ್ದು, ಅದನ್ನು ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದರು.

- ವಾರ್ಡ್ ವ್ಯಾಪ್ತಿಯ ಐ.ಓ.ಸಿ ಫ್ಲೈ ಓವರ್ ಕೆಳಗಡೆ ಮಳೆ ನೀರು ಶೇಖರಣೆಯಾಗುತ್ತಿದ್ದು, ಇದರಿಂದ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದ್ದು, ಈ ಬಗ್ಗೆ ಶಾಶ್ವತವಾಗಿ ನೀರು ನಿಲುಗಡೆಯಾಗದಂತೆ ಕ್ರಮ ವಹಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಬೃಹತ್ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯ ಐ.ಓ.ಸಿ ಫ್ಲೈ ಓವರ್ ಕೆಳಭಾಗದ ಪೊಲೀಸ್ ಚೌಕಿಯು ಖಾಲಿ ಬಿದ್ದಿದ್ದು, ಅನ್ನು ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ಉಪಯೋಗಿಸಿಕೊಳ್ಳಲು ಅನುವು ಮಾಡಿಕೊಡಲು ಸಭೆಗೆ ತಿಳಿಸಿದರು.

➢ (ಕ್ರಮ:- ಸಹಾಯಕ ಕಂದಾಯ ಅಧಿಕಾರಿ, ಮಾರುತಿಸೇವಾನಗರ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯಲ್ಲಿ ಸರ್ಕಾರದ ಯೋಜನೆಯಾದ ನಮ್ಮ ಕ್ಲಿನಿಕ್ ಯೋಜನೆ ಯಾವಾಗ ಪ್ರಾರಂಭವಾಗುವುದೆಂದು ಸಾರ್ವಜನಿಕರಿಗೆ ಮಾಹಿತಿ ನೀಡಲು ಸಭೆಗೆ ತಿಳಿಸಿದರು.

➢ (ಕ್ರಮ:- ಆರೋಗ್ಯ ವೈದ್ಯಾಧಿಕಾರಿ, ಸರ್ವಜ್ಞನಗರ ವಿಭಾಗ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ವರ್ಷದ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಅಭಾವ ಹೆಚ್ಚಾಗುತ್ತಿರುವುದರಿಂದ ಮುಂಬರುವ ಅನುದಾನದಲ್ಲಿ ಹೊಸದಾಗಿ 03 ಬೋರ್‌ವೆಲ್‌ಗಳನ್ನು ಕೊರೆದು, ಸಾರ್ವನಿಕರಿಗೆ ಅನುಕೂಲ ಮಾಡಿಕೊಡಲು ಸಭೆಗೆ ತಿಳಿಸಿದರು.
  - ➢ (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)
- ವಾರ್ಡ್ ವ್ಯಾಪ್ತಿಯ ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಬೀದಿ ಬದಿ ವ್ಯಾಪಾರಿಗಳು ಪಾದಾಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ವ್ಯಾಪಾರ ವಹಿವಾಟು ಮಾಡುತ್ತಿದ್ದು, ಇದರಿಂದ ಪಾದಾಚಾರಿ ಮಾರ್ಗದಲ್ಲಿ ಓಡಾಡುವ ನಾಗರೀಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಕ್ರಮ ವಹಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಹೊಯ್ಸಳ ಪೊಲೀಸ್, ಬಾಣಸವಾಡಿ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯ ಐ.ಓ.ಸಿ ಫ್ಲೈ ಓವರ್ ಕೆಳಭಾಗದ ರೈಲ್ವೇ ಟ್ರಾಕ್ ಹತ್ತಿರ ಪೋಲಿ ಹುಡುಗರು ಗಾಂಜ ಹಾಗೂ ಡ್ರಗ್ಸ್ ಸೇವನೆ ಮಾಡಿಕೊಂಡು ಈ ಸ್ಥಳದಲ್ಲಿ ಓಡಾಡುವ ಸಾರ್ವಜನಿಕರಿಗೆ ತೊಂದರೆಯನ್ನು ಉಂಟು ಮಾಡುತ್ತಿದ್ದು, ಅಂತವರನ್ನು ಗುರುತಿಸಿ, ಕ್ರಮ ಕೈಗೊಳ್ಳಲು ಸಭೆಗೆ ತಿಳಿಸಿದರು.

➢ (ಕ್ರಮ:- ಪೊಲೀಸ್ ಇನ್ಸ್‌ಪೆಕ್ಟರ್, ಸಂಚಾರ ಪೊಲೀಸ್ ಠಾಣೆ, ಬಾಣಸವಾಡಿ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

3) <u>ಶ್ರೀ ಕೆಂಪರಾಜು, ಸ್ಥಳೀಯರು ಮಾತನಾಡುತ್ತಾ,</u>

- ವಾರ್ಡ್ ವ್ಯಾಪ್ತಿಯ ಬಾಣಸವಾಡಿ ಮುಖ್ಯರಸ್ತೆ ಮತ್ತು ಎಂಪೈರ್ ಸರ್ಕಲ್ ಗಳಲ್ಲಿ ರಸ್ತೆ ಗುಂಡಿಗಳು ಬಿದ್ದಿದ್ದು, ಇದರಿಂದ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದ್ದು, ಕೂಡಲೇ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಬೃಹತ್ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯ ಅರಳಿಮರ ರಸ್ತೆಯಲ್ಲಿ ಬೇಕರಿಯಲ್ಲಿ ಸಿಗರೇಟ್ ವ್ಯಾಪಾರ ಮಾಡುತ್ತಿದ್ದು, ಬೇಕರ ಮುಂದಯೇ ನಿಂತು ಸೇವನೆ ಮಾಡುತ್ತಿರುವುದರಿಂದ ಅಕ್ಕಪಕ್ಕದ ಸಾರ್ವಜನಿಕರಿಗೆ

ತೊಂದರೆಯಾಗುತ್ತಿರುವುದರಿಂದ, ಕೂಡಲೇ ಬಿಡಿ ಬಿಡಿಯಾಗಿ ಮಾರುವುದನ್ನು ತಡೆಯಬೇಕೆಂದು ಸಭೆಗೆ ತಿಳಿಸಿದರು.

- (ಕ್ರಮ:- ಆರೋಗ್ಯ ವೈದ್ಯಾಧಿಕಾರಿ, ಸರ್ವಜ್ಞನಗರ ವಿಭಾಗ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

4) <u>ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು,</u>

- ವಾರ್ಡ್ ವ್ಯಾಪ್ತಿಯಲ್ಲಿ ಜಿಯೋ ಕೇಬಲ್ ಹಾಗೂ ಇತರೆ ಕೇಬಲ್ ಗಳನ್ನು ಅಳವಡಿಸಲು ಅಗೆದಿರುವ ಚೇಂಬರ್‌ಗಳನ್ನು ಎತ್ತರದಲ್ಲಿ ಹಾಕಿದ್ದು, ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದ್ದು, ಆ ಸಂಸ್ಥೆಯಿಂದಯೇ ಅದನ್ನು ಸರಿಪಡಿಸಲು ಸಭೆಗೆ ತಿಳಿಸಿದರು.

- (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯಲ್ಲಿ ಕಂಬದಿಂದ ಕಂಬಕ್ಕೆ ಬೆಸ್ಕಾಂ ವತಿಯಿಂದ ಅಳವಡಿಸಿರುವ ಹಳೆಯ ಕೇಬಲ್‌ಗಳನ್ನು ತೆರವುಗೊಳಿಸಿ, ಹೊಸದಾಗಿ ಕೇಬಲ್‌ಗಳನ್ನು ಅಳವಡಿಸಲು ಸಭೆಗೆ ತಿಳಿಸಿದರು.

- (ಕ್ರಮ:- ಬೆಸ್ಕಾಂ ಇಲಾಖೆ, ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯ 1ನೇ ಅಡ್ಡರಸ್ತೆ, ಅರಳಿಮರ ರಸ್ತೆಯಲ್ಲಿ ಚರಂಡಿಯಲ್ಲಿ ಹೂಳು ತುಂಬಿದ್ದು, ಅದನ್ನು ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದರು.

- (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯಲ್ಲಿ ಬೋರ್‌ವೆಲ್ ನೀರಿನ ಪೈಪ್‌ಗಳನ್ನು ಚರಂಡಿಯಲ್ಲಿ ಅಳವಡಿಸಿದ್ದು, ಒಂದು ವೇಳೆ ಪೈಪ್ ಕಟ್ ಆದಲ್ಲಿ ಚರಂಡಿ ನೀರು ಪೈಪ್‌ನಲ್ಲಿ ಸೇರಿ ಕಲುಶಿತವಾಗುವ ಸಾಧ್ಯತೆ ಇರುವುದರಿಂದ ಅದನ್ನು ಕೂಡಲೇ ಬದಲಾಯಿಸಲು ಸಭೆಗೆ ತಿಳಿಸಿದರು.

- (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

5) <u>ಶ್ರೀ ಗೋಪಾಲ ರೆಡ್ಡಿ, ಸ್ಥಳೀಯರು, ರವರು ಮಾತನಾಡುತ್ತಾ,</u>

- ವಾರ್ಡ್ ವ್ಯಾಪ್ತಿಯ ಐ.ಓ.ಸಿ ಫ್ಲೈ ಓವರ್ ಕೆಳಗಡೆ ಮಳೆ ನೀರು ಶೇಖರಣೆಯಾಗುತ್ತಿದ್ದು, ಇದರಿಂದ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದ್ದು, ಈ ಬಗ್ಗೆ ಶಾಶ್ವತವಾಗಿ ನೀರು ನಿಲುಗಡೆಯಾಗದಂತೆ ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಐ.ಓ.ಸಿ ಫ್ಲೈ ಓವರ್ ಕೆಳಭಾಗದ ಪೊಲೀಸ್ ಚೌಕಿಯ ಹತ್ತಿರ ಡೆಬ್ರೀಸ್ ಬಿದ್ದಿದ್ದು ಅದನ್ನು ತೆರವುಗೊಳಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಬೃಹತ್ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

6) <u>ಶ್ರೀ ಪಾಂಡಿಯನ್, ಸ್ಥಳೀಯರು ರವರು ಮಾತನಾಡುತ್ತಾ,</u>

- ವಾರ್ಡ್ ವ್ಯಾಪ್ತಿಯ 3ನೇ ಅಡ್ಡರಸ್ತೆ, ಸೀತಮ್ಮ ರಸ್ತೆಯಲ್ಲಿರುವ ಬಾರ್‌ನಲ್ಲಿ ಬೆಳಗಿನ ಜಾವದಲ್ಲಿ ರಸ್ತೆಯಲ್ಲಿ ನಿಂತುಕೊಂಡು ಕುಡಿಯುತ್ತಿದ್ದು, ಇದರಿಂದ ಈ ರಸ್ತೆಯಲ್ಲಿ ಓಡಾಡುವ ನಾಗರೀಕರಿಗೆ ತೊಂದರೆಯಾಗುತ್ತಿದ್ದು, ಇದನ್ನು ತಡೆಗಟ್ಟಲು ಸಭೆಗೆ ತಿಳಿಸಿದರು.

➢ (ಕ್ರಮ:- ಪೊಲೀಸ್ ಇನ್ಸ್‌ಪೆಕ್ಟರ್, ಬಾಣಸವಾಡಿ ಪೊಲೀಸ್ ಠಾಣೆ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು)

- 1ನೇ ಅಡ್ಡರಸ್ತೆ, ನೆಹರು ರಸ್ತೆಯಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯದೇ ಇರುವುದರಿಂದ ಅದನ್ನು ಕೂಡಲೇ ಸರಿಪಡಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಬೀದಿದೀಪಗಳ ನಿರ್ವಹಣೆ-ಪೂರ್ವ ವಲಯ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು)

- ವಾರ್ಡ್ ವ್ಯಾಪ್ತಿಯಲ್ಲಿ ಮನೆ ತೆರಿಗೆಯನ್ನು ನಿಗಧಿತ ಸಮಯದಲ್ಲಿ ಪಾಲಿಕೆಗೆ ಕಟ್ಟಲು ಸ್ವತ್ತಿನ ಮಾಲೀಕರಿಗೆ ಅರಿಯು ಮೂಡಿಸಬೇಕೆಂದು ಸಭೆಗೆ ತಿಳಿಸಿದರು.

➢ (ಕ್ರಮ:- ಸಹಾಯಕ ಕಂದಾಯ ಅಧಿಕಾರಿ, ಮಾಸೇನ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು)

7) **ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು ಮಾತನಾಡುತ್ತಾ,**

- ವಾರ್ಡ್ ವ್ಯಾಪ್ತಿಯ ಜಯಲಕ್ಷ್ಮಿ ಶಾಲೆ ರಸ್ತೆ, ಎಂ.ಎಂ.ಇ.ಟಿ ಶಾಲೆ ರಸ್ತೆ, ಐ.ಟಿ.ಸಿ ರಸ್ತೆ ಹಾಗೂ ಅರಳಿಮರ ರಸ್ತೆಯಲ್ಲಿ ರಸ್ತೆ ಗುಂಡಿಗಳು ಬಿದ್ದು, ರಸ್ತೆಗುಂಡಿಗಳನ್ನು ಕೂಡಲೇ ಮುಚ್ಚಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
  - ➢ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.

8) **ಮಾನ್ಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು** ಕೊನೆಯದಾಗಿ ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

**ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ,**

21/10/22
**ನೋಡೆಲ್ ಅಧಿಕಾರಿ**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ**

**ಪ್ರತಿಯನ್ನು,**

1) ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
2) ಕಾರ್ಯಪಾಲಕ ಅಭಿಯಂತರರು, ಯೋಜನೆ (ಪೂರ್ವ ವಲಯ) ಬಿ.ಬಿ.ಎಂ.ಪಿ
3) ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಪೂರ್ವ ವಲಯ) ಬಿ.ಬಿ.ಎಂ.ಪಿ
4) ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
5) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ,
6) ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು.ಬಿ.ಬಿ.ಎಂ.ಪಿ
7) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
8) ತೋಟಗಾರಿಕಾ ಅಧೀಕ್ಷಕರು, (ಪೂರ್ವ ವಲಯ)
9) ಆರೋಗ್ಯ ವೈದ್ಯಾಧಿಕಾರಿಗಳು, (ಪೂರ್ವ ವಲಯ)
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ
11) ಸಹಾಯಕ ಕಂದಾಯ ಅಧಿಕಾರಿ. ಮಾರುತಿ ಸೇವಾ ನಗರ ಉಪವಿಭಾಗ
12) ಕಲ್ಯಾಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
13) ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
14) ಪೋಲಿಸ್ ಇನ್ಸ್‌ಪೆಕ್ಟರ್, ಬಾಣಸವಾಡಿ.
15) ಪೋಲಿಸ್ ಇನ್ಸ್‌ಪೆಕ್ಟರ್,(ಸಂಚಾರಿ), ಬಾಣಸವಾಡಿ.
16) ಕಛೇರಿ ಪ್ರತಿ.